ಶ್ರೀ ಎಂ. ಸಿ. ಬನಪ್ಪ.—ರಾಷ್ಟ್ರೀಕರಣ ಮಾಡುವಾಗ ಏರಿಯಾವೈಸ್ ಮಾಡದೆ, ರೂಟ್ ವೈಸ್ ಮಾಡುವುದರಿಂದ ಜನಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಏರಿಯಾವೈಸ್ ಮಾಡುವುದರಿಂದ ತಾಲ್ಲೂಕು ಹೆಡ್‌ಕ್ವಾರ್ಟರಿನಿಂದ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಒಂದೇ ಬಸ್‌ನಲ್ಲಿ ಪ್ರಯಾಣ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಾವು ಮಾಡಿರತಕ್ಕ ಸ್ಕೀಂ ಏರಿಯಾವೈಸ್ ಅಲ್ಲ ರೂಟ್ ವೈಸೇ ಮಾಡಿದ್ದೇವೆ.

Loans due from the Societies to the District Central Co-operative Bank, Hassan.

*Q.—502. Sri B. H. LAKSHMANAIAH (Belur).—

Will the Government be pleased to state :—

(*a*) the names of Societies from which loans are due to the District Central Co-operative Bank, Hassan, and since how long these Societies are in overdues to the District Central Co-operative Bank (yearwar figures to be furnished) ;

(*b*) the action they have taken to recover these overdues and since when ;

(*c*) whether it is a fact that these overdues are due to the fact of negligence and not taking recovery procedure in time by the authority ;

(*d*) the authority that is entrusted with the work of recovering the overdues ?

A.—Sri KONDAJJI BASAPPA (Deputy Minister for Co-operation).—

(*a*) *Vide* statement placed on the Table of the House.

(*b*) Since February 1961 ; action has been taken to recover the overdues by persuasion and by filing cases, obtaining decrees and executing them.

(*c*) No.

(*d*) The Assistant Registrar of Co-operative Societies, Hassan.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(ಬಿ) ಪ್ರಶ್ನೆಗೆ ಉತ್ತರವಾಗಿ 1961ನೆಯ ಇಸವಿ ಫೆಬ್ರವರಿ ತಿಂಗಳ ಲಾಗಾಯಿತು ಈ ಬಾಕಿಗಳನ್ನು ವಸೂಲ್ಮಾಡುವ ಬಗ್ಗೆ ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದೀರಿ, ತಾವು ಕೊಟ್ಟಿರತಕ್ಕ ಸ್ಟೇಟ್‌ಮೆಂಟಿನಲ್ಲಿ ನೋಡಿದರೆ ಕೆಲವು ಸೊಸೈಟಿಗಳಲ್ಲಿ 1960-61ರಲ್ಲಿ ಎಷ್ಟು ಹಣ ಬಾಕಿ ಇತ್ತೋ ಅಷ್ಟೇ ಹಣ ಬಾಕಿ ಇದೆಯಲ್ಲಾ ಇದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ರೆಕವರಿ ಇಫೆಕ್ಟೀವ್ ಆಗಿ ಮಾಡಿಲ್ಲ ಆದ್ದರಿಂದ ಬಾಕಿ ಇದೆ ಅಷ್ಟೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಬ್ಯಾಂಕಿಗೆ ಒಟ್ಟು ಬರಬೇಕಾದ ಸಾಲವೆಷ್ಟು ? ರಿಬೇಟ್ ಕೊಡುವುದುಂಟೆ ?

ಶ್ರೀ ಕೊಂಡಜ್ಜಿ ಬಸಪ್ಪ.—16-3-64ರಲ್ಲಿ ಒಟ್ಟು ಸಾಲ 42 ಲಕ್ಷ ಚಿಲ್ಲರೆ ಬರಬೇಕಾಗಿತ್ತು, ಮಾಡಿಯಂ ಟರ್ಮ್ ಲೋನ್ 7 ಲಕ್ಷ 82 ಸಾವಿರ ಬರಬೇಕಾಗಿತ್ತು. ರಿಬೇಟ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ಎಲ್ಲಾ ಸೆಂಟ್ರಲ್ ಬ್ಯಾಂಕುಗಳಲ್ಲೂ ಅಸಿಸ್ಟೆಂಟ್ ರಿಜಿಸ್ಟ್ರಾರರೇ ಸೆಕ್ರೆಟರಿಯಾಗಿರುವುದರಿಂದ ಅವರಿಗೇ ಎಗ್ಸಿಕ್ಯೂಷನ್ ಕೆಲಸ ವಹಿಸುವುದು ನ್ಯಾಕ್ಯವೇ ? ಆ ಅಧಿಕಾರ ಅವರಿಗೆ ಕೊಡಲಾಗಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದನ್ನಾಗಲೇ ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಪ್ರಭಾವಶಾಲಿಗಳಾದ ಕಾಂಗ್ರೆಸ್ ಮುಖಂಡರೇ ಹೆಚ್ಚು ಬಾಕಿ ನಿಲ್ಲಿಸಿಕೊಂಡಿರುವುದರಿಂದ ವಸೂಲಿ ತಡವಾಗುವುದಕ್ಕೆ ಕಾರಣವಾಗಿದೆ, ಬಹಳ ದಿವಸಗಳಿಂದ ಬಾಕಿ ನಿಂತಿದೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಸರಿಯಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—9ನೆಯ ಸೀರಿಯಲ್ ನಂಬರಿಗೆ 60-61ರಲ್ಲಿ 21 ಸಾವಿರ ಚಿಲ್ಲರೆ ಬಾಕಿ ಇತ್ತು, 61-62ಕ್ಕೆ 41 ಸಾವಿರ ಚಿಲ್ಲರೆ ಬಾಕಿ ಇತ್ತು. ಕೆಲವು ಸಂದರ್ಭಗಳಲ್ಲಿ 59-60 ರಿಂದಲೂ ಬಾಕಿ ಇದೆ. ವಸೂಲಿ ಕ್ರಮ ಕೈಕೊಂಡರೂ ಕೂಡ ಬಾಕಿ ಹೇರಳವಾಗಿ ನಿಂತಿರುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ರಿಕವರಿ ವೀಕ್ ಎಂದು ಆಚರಣೆ ಮಾಡಿ ಕ್ರಮ ಕೈಕೊಳ್ಳಲಾಗುತ್ತಿದೆ, ಇತ್ತೀಚೆಗೆ ಬಾಕಿ ಸ್ವಲ್ಪ ಕಡಮೆಯಾಗಿದೆ.

ಶ್ರೀ ಎಸ್. ಶಿವಪ್ಪ.—ಹಾಸನ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕಟ್ಟುನಿಟ್ಟಾಗಿ ಬಾಕಿ ವಸೂಲು ಮಾಡುತ್ತಿದ್ದ ಅಧಿಕಾರಿಗಳನ್ನು ಪ್ರಭಾವಶಾಲಿಗಳು ಬೇರೆ ಕಡೆಗೆ ವರ್ಗಮಾಡಿಸಿರುವುದು ಗಮನಕ್ಕೆ ಬಂದಿದಯೇ ?

ಶ್ರೀ ಕೊಂಡಜ್ಜಿ ಬಸಪ್ಪ.— ಅದು ನಿಜವಲ್ಲ.

ಶ್ರೀ ಹಚ್. ಡಿ. ದೇವೇಗೌಡ.—ಜಿಲ್ಲಾ ಬ್ಯಾಂಕ್ ಮತ್ತು ಇತರ ಎಲ್ಲಾ ಅಧಿಕಾರಿಗಳೂ ಬಹಳ ತ್ವರಿತವಾಗಿ ಕ್ರಮ ಕೈಗೊಂಡರೂ ಕೂಡ ಕೆಲವು ಭಾಗಗಳಲ್ಲಿ ಮಳೆಬೆಳೆಯಾಗದಿರುವುದರಿಂದ ಬಾಕಿ ನಿಲ್ಲುವುದಕ್ಕೆ ಅದೊಂದು ಕಾರಣವಾಗಿದೆಯಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವಾಗಲೂ ಬಾಕಿ ಇದ್ದರೆ ಕೇಸು ಹಾಕುತ್ತಾರೆ, ಈಗ 1,600 ಕೇಸುಗಳು ತೀರ್ಮಾನವಾದಮೇಲೆ ಡಿಕ್ರಿ ಎಗ್ಜಿಕ್ಯೂಟ್ ಮಾಡಬೇಕು. ಆದರೆ ಅನೇಕ ಕಡೆ ಡಿಕ್ರಿಯಾಗಿರುವ ಸಂದರ್ಭದಲ್ಲಿ ಫೀಜು ಕೊಡುವುದಕ್ಕೆ ಹಣವಿಲ್ಲದಂತಾಗಿದೆ. ಈ ರೀತಿಯ ತೊಂದರೆಗಳಿವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—1961ರಿಂದ ಇದುವರೆಗೆ ಎಷ್ಟು ಬಾಕಿ ವಸೂಲುಮಾಡಲಾಗಿದೆ ?

ಶ್ರೀ ಕೊಂಡಜ್ಜಿ ಬಸಪ್ಪ.—16-3-64ರವರೆಗೆ ಎಸ್. ಡಿ. ಲೋನ್ 13,84,301 ರೂಪಾಯಿ ಮಾಡಿಯಂ ಲೋನ್ 4,35,175 ರೂಪಾಯಿ.

ಶ್ರೀ ಎಸ್. ಶಿವಪ್ಪ — ಜಿಲ್ಲಾ ಬ್ಯಾಂಕಿನ ಅಧ್ಯಕ್ಷರು ಬ್ಯಾಂಕಿನ ಹಣವನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಬಳಸಿಕೊಂಡಿರುವ ಬಗ್ಗೆ ದೂರು ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಇಲ್ಲ.

Number of cases pending with Government for the issue of Death Certificates for the settlement of Life Insurance claims, etc.

*Q.—221. Sri V. S. LAKSHMIKANTHAPPA (Sagar).—

Will the Government be pleased to state :—

(*a*) the number of cases pending with Government for the issue of death certificates for the settlement of Life Insurance claims and also for succession certificates from the past one year in the State ;

(*b*) the difficulties in the way of Government for empowering the Tahsildars of the Taluks to issue Death Certificates in order that delay is avoided ?

A.—Sri B. D. JATTI (Minister for Finance).—

(*a*) (i) For want of Death Certificates ... 5
(ii) For want of Succession Certificates ... 56